









ಕೆರಿಬಿಯನ್ ಇಂಟರ್‌ನ್ಯಾಷನಲ್ ಸಂಸ್ಥೆ ನಡೆಸುವ 'ಎಂಎಸ್ ಫ್ರೀಡಂ ಆಫ್ ದ ಸೀಸ್'ನಲ್ಲಿ ಟಿಕೆಟ್ ಬುಕ್ ಮಾಡಿ ದಿನಾಂಕ ಗೊತ್ತುಪಡಿಸಿದ್ದೆವು. ಅಲ್ಲಿಂದ ಪ್ರವಾಸಕ್ಕೆ ಬೇಕಾದ ಬಟ್ಟೆ, ವೀಸಾ, ಇಮಿಗ್ರೇಷನ್ ಸೇರಿದಂತೆ ಎಲ್ಲ ಕೆಲಸಗಳನ್ನೂ ಒಂದೊಂದಾಗಿ ಮಾಡಿದೆವು.

ಅಂದಹಾಗೆ ನಾವು ಇದ್ದದ್ದು ಕನೆಕ್ಟಿಕಟ್‌ನಲ್ಲಿ. ನಾವು ಹಡಗು ಏರಲು ಹೋಗಬೇಕಿದ್ದುದು 1,212 ಮೈಲಿ ದೂರದಲ್ಲಿದ್ದ ಫ್ಲಾರಿಡಾಕ್ಕೆ. ನಮ್ಮದು ಒಂದು ವಾರದ ಪ್ರವಾಸ. ಅದು ಸೆಪ್ಟೆಂಬರ್ ತಿಂಗಳು. ನ್ಯೂಯಾರ್ಕ್‌ಗೆ ತೆರಳಿ, ಅಲ್ಲಿಂದ ಓರ್ಲ್ಯಾಂಡೋ ವಿಮಾನ ನಿಲ್ದಾಣದಲ್ಲಿ ಬಂದಿಳಿದು, ಸುಮಾರು ಒಂದೂವರೆ ತಾಸು ರಸ್ತೆ ಮಾರ್ಗದಲ್ಲಿ ಸಾಗಿ ಫ್ಲಾರಿಡಾದ ಪೋರ್ಟ್ ಕೆನೆವರಲ್‌ಗೆ ತಲುಪಿದೆವು.

ಐಶಾರಾಮಿ ಹಡಗಿನ ಪ್ರವಾಸ, ನೌಕಾಯಾನ ಹಾಗೂ ಸರಕು ಸಾಗಣೆಗೆ ಪೋರ್ಟ್ ಕೆನೆವರಲ್ ವಿಶ್ವದಲ್ಲೇ ಅತ್ಯಂತ ಪ್ರಸಿದ್ಧಿ ಹೊಂದಿದೆ. ಅಂದಾಜಿನ ಪ್ರಕಾರ ಈ ಬಂದರಿನ ಮುಖಾಂತರ ವಾರ್ಷಿಕ 35 ಲಕ್ಷಕ್ಕೂ ಅಧಿಕ ಮಂದಿ ಹಡಗಿನ ಮುಖಾಂತರ ಪ್ರವಾಸಕ್ಕೆ ತೆರಳುತ್ತಾರೆ. ನಾವು ಬರುವ ಮೊದಲೇ